




ಚರಿತ್ರೆಯ ಯಾವುದೋ ಭಾವವೊಂದನ್ನು ದಾಟಿಸುವ ಹವಣಿಕೆಯಲ್ಲಿರುವಂತೆ ಕಾಣಿಸುವ ಕಲಾವಿದರು

ಪಂಜಾಬುಗಳು, ಮಧ್ಯ ಏಶಿಯಾದಿಂದ ಭಾರತಕ್ಕೆ ಖೈಬರ್‌ಪಾಸ್ ಮೂಲಕ ಪ್ರವೇಶಿಸುವ ರೇಷ್ಮೆ ಹಾದಿಯಲ್ಲಿ ಅಡ್ಡಹಾಯುವ ಪ್ರದೇಶಗಳು. ಹೀಗಾಗಿ ಇವು ಚರಿತ್ರೆಯುದ್ದಕ್ಕೂ ಆಕ್ರಾಮಕ–ಆತ್ಮರಕ್ಷಕ ಕದನಗಳಿಗೆ ಸಾಕ್ಷಿ ಆಗಬೇಕಾಯಿತು. ಸಂಘರ್ಷವೆನ್ನುವುದು ಬದುಕಿನೊಳಗೇ ಅಂತರ್ಗತವಾಯಿತು. ಅಲ್ಪಮಳೆ ಬೀಳುವ ಈ ಪ್ರದೇಶದಲ್ಲಿ ನಿಸರ್ಗದೊಡನೆ ಕೂಡ ಜನ ಸೆಣಸಾಡಬೇಕಿತ್ತು. ಮರುಭೂಮಿ ಪ್ರದೇಶಗಳಲ್ಲಿ ಬೇಸಾಯಕ್ಕಿಂತ ವ್ಯಾಪಾರ ಮತ್ತು ಕುಶಲಕಲೆಗಳು ಮುಖ್ಯ ಆರ್ಥಿಕತೆಗಳು. ರಾಜಸ್ಥಾನದ ಈ ವಿಶಿಷ್ಟ ರಾಜಕೀಯ ಭೌಗೋಳಿಕ ಹಿನ್ನೆಲೆಯಲ್ಲಿ, ಇಲ್ಲಿನ ನೇಕಾರಿಕೆ, ಚಿತ್ರಕಲೆ, ಗಾಯನ, ಚರ್ಮಕಾರಿಕೆಯ ಕಲೆಗಳು ಅರಳಿರುವುದನ್ನು ಅರಿಯಬೇಕು. ಜೋಧಪುರದಲ್ಲಿ ನಾವು ಭೇಟಿ ಮಾಡಿದ ಹನವಂತ್, ಒಬ್ಬ ಪಾರಂಪರಿಕ ಚರ್ಮಕಾರ. ಗೂಡಿನಂತಹ ಅಂಗಡಿಯಲ್ಲಿ ಚರ್ಮೋತ್ಪನ್ನಗಳನ್ನು ಮಾರುತ್ತಿದ್ದ ಈ ಕಲಾವಿದ, ಚರ್ಮದ ಮೇಲೆ ಸೊಗಸಾದ ಚಿತ್ರ ಬಿಡಿಸುತ್ತಿದ್ದನು. ‘ನಿಮ್ಮಂತಹ ಕಲಾವಿದರಿಗೆ ದೊಡ್ಡ ಕಂಪನಿಗಳಲ್ಲಿ ಅವಕಾಶ ಸಿಗುವುದಿಲ್ಲವಾ?’ ಎಂದು ಕೇಳಿದೆ. ‘ಸಿಗಬಹುದು. ಇಲ್ಲಿರುವ ಪ್ರಯೋಗಶೀಲ ಸ್ವಾತಂತ್ರ್ಯ, ನೆಮ್ಮದಿ ಅಲ್ಲಿ ಸಿಗುವುದಿಲ್ಲ’ ಎಂದು ಜವಾಬು ಸಿಕ್ಕಿತು.

ರಾಜಸ್ಥಾನದ ಕೋಟೆಗಳನ್ನು ನೋಡುವಾಗ, ‘ಆಧುನಿಕ ಯಂತ್ರಗಳಿಲ್ಲದ ಕಾಲದಲ್ಲಿ ಇಷ್ಟೊಂದು ಭಾರದ ಕಲ್ಲುಗಳನ್ನು ಹೇಗಾದರೂ ಕೆತ್ತಿ ಮೇಲಿಟ್ಟರು’ ಎಂದೇ ಪ್ರವಾಸಿಗರು ಬೆರಗುಪಡುವರು. ಅವರ ತಮ್ಮ ಬೆರಗಿಗೆ ನಮ್ಮ ಪೂರ್ವಿಕರು ನಮಗಿಂತ ಒಳ್ಳೆಯ ಊಟ ಮಾಡುತ್ತಿದ್ದರು ಮತ್ತು ಗಟ್ಟಿಮುಟ್ಟಾಗಿದ್ದರು ಎಂದು ಸಮರ್ಥನೆಯನ್ನೂ ಕೊಟ್ಟುಕೊಳ್ಳುತ್ತಿದ್ದರು. ಹಿಂದಿನವರ ಶಕ್ತಿಸಾಮರ್ಥ್ಯ ಕುರಿತ ಮೆಚ್ಚುಗೆಯ ಈ ವಾದವು, ವರ್ತಮಾನದ ಆಹಾರ ಆರೋಗ್ಯಗಳ ಮೇಲಿನ ಕಟುಟೀಕೆಯಾಗಿ ಬದಲಾಗುತ್ತಿತ್ತು. ಇಲ್ಲಿನ ಸಮಸ್ಯೆಯೆಂದರೆ, ಗತಕಾಲದ ವೈಭವೀಕರಣ ಹಾಗೂ ವರ್ತಮಾನದ ಮೇಲೆ ಅನಗತ್ಯ ಕಟುತ್ವ; ಹಿರೀಕರ ಸಾಧನೆಗೆ ಮೈಮರೆಯುವ ಈ ದೃಷ್ಟಿಕೋನವು, ಕೋಟೆ–ಅರಮನೆಗಳನ್ನು ಕಟ್ಟಲು ದೊರೆಗಳು ಜನರನ್ನು ಹೇಗೆ ದುಡಿಸಿಕೊಂಡಿರಬಹುದು ಎಂದು ಕೇಳಿಕೊಳ್ಳುವುದಿಲ್ಲ. ಆದರೂ ‘ಪ್ರಜೆಗಳೆಲ್ಲ ಬವಣೆಯಲ್ಲಿರುವಾಗ ರಾಜರು ಇಂಥ ಭವ್ಯ ಅರಮನೆಗಳನ್ನು ಕಟ್ಟುವ ಅಗತ್ಯವಿತ್ತೇ’ ಎಂಬ ಪ್ರಶ್ನೆಯನ್ನು ಯಾರೋ ಪ್ರಜ್ಞಾವಂತರು ಎತ್ತಿರಬಹುದು. ಎಂತಲೇ ಜೋಧಪುರದ ಉಮ್ಮೈದ್ ಅರಮನೆಯ ಮಾಹಿತಿ ಫಲಕದಲ್ಲಿ, ‘ಬರಗಾಲದಲ್ಲಿ ಜನರಿಗೆ ಉದ್ಯೋಗ ಸೃಷ್ಟಿಮಾಡುವುದು ಅರಮನೆ ಕಟ್ಟುವ ಉದ್ದೇಶವಾಗಿತ್ತು’ ಎಂದು ಸಮಜಾಯಿಷಿ ಕೊಡಲಾಗಿದೆ. ಈ ಸಮಜಾಯಿಷಿ, ಸಮಾಧಾನ ಕೊಡುವ ಬದಲು ‘ಒಂದು ರಾಜಮನೆತನದ ಸುಖಕ್ಕೆ ಇಷ್ಟೆಲ್ಲ ಜರೂರಿಯಿತ್ತೇ?’ ಎಂಬ ಪ್ರಶ್ನೆಯನ್ನೇ ಮತ್ತೆ ಕೆರಳಿಸುತ್ತದೆ.

ಕೋಟೆ–ಅರಮನೆಗಳನ್ನು, ಅವುಗಳ ಕಟ್ಟೋಣಕ್ಕೆ ಬೇಕಾದ ಸಾಮಗ್ರಿಯನ್ನು ಒದಗಿಸಿದ ಸ್ಥಳೀಯ ಪರಿಸರದ ಕಣ್ಣಲೆಯಿಂದ ಗಮನಿಸಿದರೆ, ಕೆಲವು ಸ್ವಾರಸ್ಯಕರ ಸಂಗತಿ ಹೊಳೆಯುತ್ತವೆ. ರಾಜಸ್ಥಾನದ ಅರಮನೆ–ಕೋಟೆಗಳಿಗೆ ಬಳಕೆಯಾಗಿರುವುದು ಅಮೃತಶಿಲೆ ಮತ್ತು ಕೆಂಗಲ್ಲು. ಇದು ಅಲ್ಲಿನ ಅರಾವಳಿ ಪರ್ವತಗಳಿಂದ ಒದಗಿದ್ದು. ಈ ಕಲ್ಲುಗಳಿಗೆ ಬಿಸಿಲ ಝಳ ತಡೆವ ವಿಶೇಷ ಶಕ್ತಿಯಿದೆ. ಹೀಗಾಗಿ ಅರಮನೆಯ ಒಳಹೊಕ್ಕರೆ ನೆರಳಿಂದ ತಂಪಾದ ಛತ್ರಿನೊಳಗೆ ಹೋದಂತಾಗುತ್ತದೆ. ವಿಶೇಷವೆಂದರೆ, ಜನರು ತಮ್ಮ ಮನೆಗಳನ್ನೂ ಇದೇ ಕಲ್ಲಿನಿಂದ ಕಟ್ಟಿಕೊಂಡಿದ್ದಾರೆ. ಸ್ಥಳೀಯತೆ ಬಿಂಬಿಸುವ ಮತ್ತು ರಾಜಪರಂಪರೆ ಮುಂದುವರೆಸುವ ಆಶಯದಿಂದ, ಸ್ಟಾರ್ ಹೋಟೆಲುಗಳು ಕೂಡ ಇವೇ ಕಲ್ಲುಗಳಿಂದ ರಾಜಸ್ಥಾನೀ ಶೈಲಿಯಲ್ಲಿ ನಿರ್ಮಾಣವಾಗಿವೆ. ಕಟ್ಟಡಗಳ ಸಾಮಗ್ರಿ ಮತ್ತು ವಾಸ್ತುಶೈಲಿಯಲ್ಲಿರುವ ಈ ತೋರಿಕೆಯ ಹಳತನವು, ಅತ್ಯಾಧುನಿಕ ಬದುಕಿನಿಂದ ಬಸವಳಿದು ಬರುವ ನಗರವಾಸಿ ಪ್ರವಾಸಿಗರಿಗೆ ಪ್ರಿಯವಾಗುತ್ತದೆ. ಅದರಲ್ಲೂ ಭಾರತಕ್ಕೆ ಪ್ರಾಚೀನತೆಯನ್ನೇ ಹುಡುಕಿ ಬರುವ ವಿದೇಶಿ ಪ್ರವಾಸಿಗರಿಗೆ ಮುದಗೊಳಿಸುತ್ತದೆ. ಇದು ಪರಂಪರೆಯನ್ನು ಆಧುನಿಕತೆಯ ಜತೆಗೆ ಹದವಾಗಿ ಬೆರೆಸಿ ಬಡಿಸುವ ಅಥವಾ ಮಾರುವ ಪ್ರವಾಸೋದ್ಯಮದ ತಂತ್ರ ಕೂಡ ಆಗಿದೆ.

ರಾಜಸ್ಥಾನದ ಅರಮನೆ–ಕೋಟೆಗಳಲ್ಲಿ ಹಿಂದಿಯನ್ನು ಬಿಟ್ಟರೆ ಹೆಚ್ಚು ಕೇಳುವ ಭಾಷೆ ಅಂಗ್ರೇಜಿ. ಇಲ್ಲಿನ ಪ್ರವಾಸೋದ್ಯಮದಲ್ಲಿ ಇಂಗ್ಲಿಷಿನ ವ್ಯಾಮೋಹ ವಿಶೇಷವಾಗಿದೆ. ಹೋಟೆಲ್ ಉದ್ಯಮವು ತನ್ನ ನೌಕರರು ಇಂಗ್ಲಿಷ್ ಕಲಿಯಬೇಕೆಂದು ಅಪೇಕ್ಷಿಸುತ್ತಿದೆ. ಇಂಗ್ಲಿಷ್ ಬಾರದ ನೌಕರರಿಗೆ ಕಲಿಸುವ ವ್ಯವಸ್ಥೆಯನ್ನೂ ಮಾಡಿದೆ. ನಾವು ವಸ್ತಿಯಿದ್ದ ಜೋಧಪುರದ ‘ದೇವಕೋಟೆ’ ಹೋಟೆಲಿನ ಮನೋಜ್ ಮತ್ತು ಚರ್ಮದಂಗಡಿಯ ಹನುವಂತ್, ಹರಕುಮುರುಕು ಅಂಗ್ರೇಜಿಯಲ್ಲಿ ಮಾತಾಡುತ್ತಿದ್ದರು. ನಾವು ಹಿಂದಿಯಲ್ಲಿ ಉತ್ತರಿಸಿದರೆ ‘ಇಂಗ್ಲಿಷಲ್ಲೇ ಮಾತಾಡಿರಿ. ನಮಗೂ ಅಭ್ಯಾಸವಾಗಲಿ’



ಕುಂಬಳಗಢ ಕೋಟೆಯ ವಿಹಂಗಮ ನೋಟ